ದಿನಾಂಕ: ...

# ಕರ್ನಾಟಕ ಸರ್ಕಾರ

| | | |
|---|---|---|
| ವಿಧಾನ ಪರಿಷತ್ತಿನ ಸದಸ್ಯರು | : | ಶ್ರೀ ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 845 |
| ಉತ್ತರಿಸುವ ದಿನಾಂಕ | : | 28.09.2019 |
| ಉತ್ತರಿಸುವವರು | : | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ರೈತರು ಅವರ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಪಡೆಯಲು ಇರುವ ಮಾನದಂಡಗಳೇನು: ಇದನ್ನು ಪಡೆಯಲು ಯಾವ ಯಾವ ದಾಖಲೆಗಳನ್ನು ಸಲ್ಲಿಸಬೇಕು: | ಸರ್ಕಾರದ ಆದೇಶ ಸಂಖ್ಯೆ: ಸಕಇ 225 ಬಿಸಿಎ 2000 ದಿನಾಂಕ:30.03.2002ರ ಅನುಬಂಧ-2 ಹೊಸ ಸಮಗ್ರ ಕೆನೆಪದರ ಅನ್ವಯ ಹಿಂದುಳಿದ ವರ್ಗಗಳ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳನ್ನು ಪಡೆಯಲು ಈ ಕೆಳಕಂಡ ಮಾನದಂಡಗಳನ್ನು ನಿಗಧಿಪಡಿಸಲಾಗಿರುತ್ತದೆ.<br>1. ಅಭ್ಯರ್ಥಿಯ ಮತ್ತು ಅವರ ತಂದೆ, ತಾಯಿ/ಪೋಷಕರು, ಸರ್ಕಾರದ ಒಂದನೇ ಅಥವಾ ಎರಡನೇ ದರ್ಜೆಯ ಅಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದರೆ ಅಥವಾ ಸಾರ್ವಜನಿಕ ಉದ್ಯಮದಲ್ಲಿ ತತ್ಸಮಾನವಾದ ಹುದ್ದೆಗಳನ್ನು ಹೊಂದಿದ್ದರೆ ಅಥವಾ ಖಾಸಗಿ ಕೈಗಾರಿಕೆ/ ಸಂಸ್ಥೆಗಳ ಉದ್ಯೋಗಿಯಾಗಿದ್ದು, ಎರಡನೆಯ ದರ್ಜೆ ಅಧಿಕಾರಿಯು ಪಡೆಯುತ್ತಿರುವ ವೇತನ ಶ್ರೇಣಿಗಿಂತ ಕಡಮೆ ಇಲ್ಲದ ವೇತನ ಶ್ರೇಣಿಯ ವೇತನ ಪಡೆಯುತ್ತಿದ್ದರೆ (ವೇತನ ಶ್ರೇಣಿ 43,100-83,900)<br>2. ಅಭ್ಯರ್ಥಿಯ ಮತ್ತು ಅವರ ತಂದೆ, ತಾಯಿ/ಪೋಷಕರ ವಾರ್ಷಿಕ ಒಟ್ಟು ಆದಾಯ(Gross Income) ರೂ.2.00 ಲಕ್ಷ ಮೀರಿದ್ದರೆ (ಪ್ರಸ್ತುತ 8.00 ಲಕ್ಷಗಳು)<br>3. ಅಭ್ಯರ್ಥಿಯ ಮತ್ತು ಅವರ ತಂದೆ, ತಾಯಿ/ಪೋಷಕರ ಸೇರಿದಂತೆ ಕರ್ನಾಟಕ ಭೂ ಸುಧಾರಣೆ ಕಾಯ್ದೆ 1961ರಡಿಯಲ್ಲಿ ನಿಗದಿಪಡಿಸಿರುವ 10 ಯುನಿಟ್ ಕೃಷಿ ಭೂಮಿ ಹೊಂದಿರುವವರು ಆದರೆ ಪ್ಲಾಂಟೇಷನ್ ಬೆಳೆಗಳನ್ನು ಬೆಳೆಯುವ ಭೂಮಿಗೆ ಸಂಬಂಧಿಸಿದಂತೆ 20 ಎಕರೆಗಿಂತ ಹೆಚ್ಚು ಭೂಮಿ ಹೊಂದಿರುವವರು. |

| | | |
|---|---|---|
| ಆ. | ಕೃಷಿ ಆದಾಯ ರೂ.8.00 ಲಕ್ಷಗಳ ಮೇಲ್ಪಟ್ಟು ಇರುವ ರೈತರಿಗೆ ಜಾತಿ ಪ್ರಮಾಣ ಪತ್ರಗಳನ್ನು ವಿತರಿಸು ವುದಿಲ್ಲವೇಕೆ: (ಕಾರಣಗಳೊಂದಿಗೆ ಮಾಹಿತಿ ನೀಡುವುದು) | ಸರ್ಕಾರದ ಆದೇಶ ಸಂಖ್ಯೆ :ಸಕಇ 225 ಬಿಸಿಎ 200 ದಿನಾಂಕ:30.03.2002ರ ಅನುಬಂಧ-2 ಹೊಸ ಸಮಗ್ರ ಕೆನೆಪದರ ಅನ್ವಯ ಹಿಂದುಳಿದ ವರ್ಗಗಳ ಮೀಸಲಾತಿಗೆ ಕುಟುಂಬದ ಒಟ್ಟು ವಾರ್ಷಿಕ ವರಮಾನ ರೂ.2.00 ಲಕ್ಷ ಮೀರಿದ್ದರೆ(ಪ್ರಸ್ತುತ ಸರ್ಕಾರದ ಆದೇಶ ಸಂಖ್ಯೆ: ಹಿಂವಕ 304 ಬಿಸಿಎ 2017 ದಿನಾಂಕ:14/09/2018ರನ್ವಯ ರೂ.8.00 ಲಕ್ಷಗಳನ್ನು ನಿಗದಿಪಡಿಸಿದ್ದು, ಅದರನ್ವಯ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳನ್ನು ವಿತರಿಸಲಾಗುತ್ತಿದೆ. |
| ಇ. | ಹಿಂದುಳಿದ ವರ್ಗಗಳ ಪ್ರವರ್ಗ-2ಎ, 2ಬಿ, 3ಎ, 3ಬಿ ಗಳ ರೈತರಿಗೆ ಜಾತಿ ಪ್ರಮಾಣ ಪತ್ರ ಪಡೆಯಲು ಇರುವ ಮಾನದಂಡವೇನು? | ಸರ್ಕಾರದ ಆದೇಶ ಸಂಖ್ಯೆ: ಸಕಇ 225 ಬಿಸಿಎ 2000 ದಿನಾಂಕ:30.03.2002ರನ್ವಯ ಹಾಗೂ ಸರ್ಕಾರದ ಆದೇಶ ಸಂಖ್ಯೆ:ಹಿಂವಕ 304 ಬಿಸಿಎ 2017 ದಿನಾಂಕ:14/09/2018ರನ್ವಯ ಹಿಂದುಳಿದ ವರ್ಗಗಳಿಗೆ ಕೆನೆಪದರ ಮೀಸಲಾತಿ ಮಿತಿಯನ್ನು ರೂ.8.00 ಲಕ್ಷಗಳಿಗೆ ನಿಗದಿಪಡಿಸಲಾಗಿದ್ದು, ಸದರಿ ಆದೇಶದನ್ವಯ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳನ್ನು ವಿತರಿಸಲಾಗುತ್ತಿದೆ. ರೂ.8.00 ಲಕ್ಷಗಳ ಆದಾಯ ಮಿತಿ ಮೀರಿದಲ್ಲಿ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳನ್ನು ವಿತರಿಸಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ. |

**ಸಂಖ್ಯೆ:** ಹಿಂವಕ 147 ಬಿಸಿಎ 2020

(ಬಿ. ಶ್ರೀರಾಮುಲು)
(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)